International Journal of Kannada Research
www.kannadajournal.com

ISSN: 2454–5813
IJSR 2017; 3(2): 40-42
© 2017 IJKS
www.kannadajournal.com
Received: 15-02-2017
Accepted: 19-03-2017

**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಧ್ಯಾಪಕರು,
ಸ.ಪ್ರ.ದ.ಕಾಲೇಜು ಚನ್ನಪಟ್ಟಣ,
ರಾಮನಗರ ಜಿಲ್ಲೆ, ಕರ್ನಾಟಕ,
ಭಾರತ

**Correspondence**
**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಧ್ಯಾಪಕರು,
ಸ.ಪ್ರ.ದ.ಕಾಲೇಜು ಚನ್ನಪಟ್ಟಣ,
ರಾಮನಗರ ಜಿಲ್ಲೆ, ಕರ್ನಾಟಕ,
ಭಾರತ

# ಮಿರ್ಲೆ ಗ್ರಾಮದ ಅಮೃತೇಶ್ವರ ದೇವಾಲಯ – ಒಂದು ಚಾರಿತ್ರಿಕ ವೀಕ್ಷಣೆ

**ಡಾ. ಎಸ್.ಕೆ.ದೇವೆಗೌಡ**

**DOI:** https://doi.org/10.22271/24545813.2017.v3.i2a.841

**ಪೀಠಿಕೆ**

ಜಾಗತಿಕ ಚರಿತ್ರೆಯ ರಚನೆಯಲ್ಲಿ ಪುರಾತತ್ವ ಆಧಾರಗಳು ಹೆಚ್ಚು ಹೆಚ್ಚು ಉಪಯುಕ್ತವಾಗಿರುತ್ತವೆ. ಏಕೆಂದರೆ, ಈ ಪುರಾತತ್ವೀಯ ಆಧಾರಗಳಲ್ಲಿ ಕಂಡುಬರುವಂತಹ ಶಿಲಾಶಾಸನಗಳು, ನಾಣ್ಯಗಳು, ಸಾರ್ಮಕಗಳಿಂದಲೂ ಕೂಡ ಒಂದು ಘನ ಚರಿತ್ರೆಯ ಸಂರಚನೆಗೆ ಹೆಚ್ಚು ಖಚಿತವಾದ ಮಾಹಿತಿಯನ್ನು ಮತ್ತು ಸಾಕ್ಷಿಯನ್ನು ದೊರೆಕಿಸಿಕೊಡುತ್ತದೆ ಎಂದೇ ಹೇಳಬಹುದು. ಹಾಗೆಯೇ ಒಂದು ಸ್ಥಳದ ಬಗೆಗಿನ ಚರಿತ್ರೆಯ ಸಂರಚನೆಗೂ ಸಹ ಪ್ರಮುಖವಾಗಿ ಸಾಹಿತ್ಯಾಧಾರ ಮತ್ತು ಪುರಾತತ್ತ್ವ ಆಧಾರಗಳ ಅವಶ್ಯಕತೆಯೂ ಹೆಚ್ಚಿನದಾಗಿಯೇ ಇರುತ್ತದೆ. ಆದ್ದರಿಂದಲೇ ಇದರ ಜೊತೆಯಲ್ಲಿ ಆಯಾಯ ಪ್ರದೇಶಗಳ, ಗ್ರಾಮದ ಸ್ಥಳ ಪುರಾಣಗಳು, ಕಾಲಾನುಕ್ರಮದಲ್ಲಿ ಆಳಿರುವ ರಾಜರ ಆಳ್ವಿಕೆಯ ಕುರುಹುಗಳು, ಅವರು ಬರೆಸಿರುವ ಶಿಲಾಶಾಸನಗಳು ಮತ್ತು ಸಾರ್ಮಕಗಳಿಂದ ಆ ಗ್ರಾಮದ ಖಚಿತವಾದ ಚರಿತ್ರೆಯ ರಚನೆಗೆ ಸಹಾಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಿರ್ಲೆ ಗ್ರಾಮದಲ್ಲಿನ ಅಮೃತೇಶ್ವರ ದೇವಾಲಯದ ಒಂದು ಚಾರಿತ್ರಿಕ ವೀಕ್ಷಣೆಯನ್ನು ಈ ಮುಂದಿನಂತೆ ಮಾಡಲು ಪ್ರಯತ್ನಿಸಲಾಗಿದೆ.

ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕು ಪ್ರದೇಶಕ್ಕೆ ಸೇರಿದ ಮಿರ್ಲೆ ಗ್ರಾಮವು ಪ್ರಸ್ತುತ ಒಂದು ಹೋಬಳಿ ಕೇಂದ್ರವಾಗಿದೆ. ಈ ಮಿರ್ಲೆ ಗ್ರಾಮವು ತಾಲ್ಲೂಕು ಕೇಂದ್ರ ಪ್ರದೇಶದಿಂದ ಸರಿಸುಮಾರು 10 ಕಿ.ಮೀ ದೂರದಲ್ಲಿದೆ. ಇದು ಮೈಸೂರು ಜಿಲ್ಲಾ ಕೇಂದ್ರ ಪ್ರದೇಶದಿಂದಲೂ ಕೂಡ ಸರಿಸುಮಾರು 58.ಕಿ.ಮೀ.ದೂರದಲ್ಲಿದೆ ಎಂಬುದನ್ನು ಗುರುತಿಸಲಾಗಿದೆ. ಈ ಗ್ರಾಮದ ಉತ್ತರಕ್ಕೆ ಪಿರಿಯಾಪಟ್ಟಣವನ್ನು ಪೂರ್ವಕ್ಕೆ ಹುಣಸೂರು, ಪಶ್ಚಿಮಕ್ಕೆ ಅರಕಲಗೂಡು, ದಕ್ಷಿಣಕ್ಕೆ ಹೊಳೆನರಸೀಪುರ ತಾಲ್ಲೂಕುಗಳಿಂದ ಸುತ್ತುವರಿದಿದೆ ಎಂಬುದು ಕಂಡುಬರುತ್ತದೆ.

ಇದೇ ಗ್ರಾಮದಲ್ಲಿರುವಂತಹ ಅಮೃತೇಶ್ವರ ದೇವಾಲಯವು ಹಿಂದೆ ಮೂಲತಃ ಗ್ರಾಮದ 20 ಗದ್ದೆಯ ಮಧ್ಯದಲ್ಲಿತ್ತು ಎಂಬುದು ತಿಳಿದುಬರುತ್ತದೆ. ಇದನ್ನು ಪ್ರಾಚ್ಯವಸ್ತು ಇಲಾಖೆಯವರು ಊರಿನ ಮಧ್ಯೆಭಾಗಕ್ಕೆ ತಂದು ದೇವಾಲಯವನ್ನು ನಿರ್ಮಾಣ ಮಾಡಿದ್ದಾರೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗುಡಿ, ಸುಕನಾಸಿ, ನವರಂಗಗಳನ್ನು ಹೊಂದಿರುತ್ತದೆ. ಇದರ ಗರ್ಭಗುಡಿಯಲ್ಲಿ ಎತ್ತರವಾದ ಬೋದಿಗೆಯ ಮೇಲೆ ಮಹಾಶಿವಲಿಂಗವೊಂದನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿನ ಸುಕನಾಸಿಯಲ್ಲಿ ಭುವನೇಶ್ವರಿಯ ದೇವಾಲಯದ ಬಾಗಿಲಿನ ಒಳಗೆ ತೊಲೆಯ ಮೇಲೆ 17ನೇ ಶತಮಾನದ ಶಾಸನವೊಂದಿರುವುದನ್ನು ಗುರುತಿಸಲಾಗಿದೆ. ಇದರಲ್ಲಿ ದೇವರ ನಂದಾ ದೀವಿಗೆಗೆ ಹಣವನ್ನು ಕೊಟ್ಟ ಬಗೆಗೆ ಉಲ್ಲೇಖವಿದೆ. ಹಾಗೆಯೇ ಮೈಸೂರು ಸಂಸ್ಥಾನದ ಜಯಚಾಮರಾಜ ಒಡೆಯರು ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ್ದರೆಂದು ಕ್ಷೇತ್ರಕಾರ್ಯದಿಂದ ಮಾಹಿತಿಯನ್ನು ದಾಖಲೀಕರಿಸಲಾಗಿದೆ.

ಹೊಯ್ಸಳರ ಕಾಲದ ದೇವಾಲಯ ಲಕ್ಷಣವೂ ಈ ದೇವಾಲಯದಲ್ಲಿ ಕಂಡುಬರುತ್ತದೆ. ಆದರೆ, ಹೊಯ್ಸಳರ ಯಾವ ರಾಜರ ಆಡಳಿತದ ಕಾಲಘಟ್ಟದಲ್ಲಿ ನಿರ್ಮಿಸಿದ್ದರು ಎಂಬುದು ಸರಿಯಾಗಿ ತಿಳಿದು ಬಂದಿಲ್ಲ. ಆದರೆ ಯೋಗನರಸಿಂಹ ಸ್ವಾಮಿ ದೇವಾಲಯ ನಿರ್ಮಾಣವಾದ ಕಾಲದಲ್ಲಿಯೇ ಈ ದೇವಾಲಯ ನಿರ್ಮಿಸಲಾಗಿದೆ ಎಂದು ಸ್ಥಳೀಯರು ಹೇಳುತ್ತಿರುವುದು ಕಂಡುಬರುತ್ತದೆ. ಮೊದಲು ಎರಡು ದೇವಾಲಯಗಳು ಅಕ್ಕ–ಪಕ್ಕದಲ್ಲಿ ಗದ್ದೆಯಲ್ಲಿತ್ತು. ಸ್ಥಳೀಯ ಜನರ ಹೇಳಿಕೆಯ ಪ್ರಕಾರ;

ಹೊಯ್ಸಳರ ದೊರೆ ಎರಡನೇ ನರಸಿಂಹ (1220–35) ರಲ್ಲಿ ನಿರ್ಮಾಣವಾಗಿರಬೇಕು. ಹೊಯ್ಸಳರು ಶೈವ ದೇವಾಲಯಕ್ಕೂ ಹೆಚ್ಚು ಪ್ರೋತ್ಸಾಹ ನೀಡಿದ್ದರು. ಆದ್ದರಿಂದಲೇ ಹೆಚ್ಚು ಹೆಚ್ಚು ಶಿವಾಲಯಗಳನ್ನು ರಾಜ್ಯ ಎಲ್ಲೆಡೆ ನಿರ್ಮಿಸಿದ್ದಾರೆ ಎಂಬುದು ಕೂಡ ದೇವಾಲಯಗಳ ಘನ ಚರಿತ್ರೆಯಲ್ಲಿ ಕಂಡುಬರುತ್ತದೆ ಎಂದು ಹೇಳಬಹುದು.

ಈ ದೇವಾಲಯದ ಗರ್ಭಗುಡಿಯೂ ಮೂಲಬಿಂಬ ಪ್ರತಿಷ್ಠಾಪಿತವಾಗಿರುವ ಗರ್ಭಗೃಹಕ್ಕೆ ಮೂಲ ದೇವತಾಮಂಟಪ, ಗರ್ಭಗೇಹ, ಪ್ರಾಸಾದ, ಮೂಲಪ್ರಸಾದ ಎಂಬ ಪರ್ಯಾಯ ಪದಗಳಿವೆ. ಇದು ಈ ಪ್ರದೇಶವನ್ನು ಆಳಿರುವಂತಹ ಹೊಯ್ಸಳರ ಕಲೆ ಮತ್ತು ವಾಸ್ತುಶಿಲ್ಪ ಶೈಲಿಯಲ್ಲಿ ಗರ್ಭಗೃಹದ ಮೇಲೆ ಒಂದು ಪ್ರಸಾದವನ್ನು ರಚಿಸಿ, ಏಕಕೂಟ, ದ್ವಿಕೂಟ, ಚತುಷ್ಪಕೂಟ, ಪಂಚಕೂಟ ದೇವಾಲಯಗಳನ್ನು ನಿರ್ಮಿಸಿದ್ದರು ಎಂದು ಹೇಳಬಹುದು. ಇದೇ ದೇವಾಲಯದ ಒಳಗಿರುವ ಮೂಲ ಮೂರ್ತಿಗಳನ್ನು ಅನುಸರಿಸಿ ಗರ್ಭಗೃಹ ಬಹುಪಾಲು ಚೌಕಾಕಾರ ಅಥವಾ ಆಯತಾಕಾರವಾಗಿರುವುದು ದ್ರಾವಿಡ ಮಾದರಿಗಳಂತೆ ಭದ್ರ, ಪ್ರತಿಭದ್ರ, ಕರ್ಣ ಮುಂತಾದವುಗಳನ್ನು ಉಪಯೋಗವೂ ಸಾಕಷ್ಟು ಇರುವುದು ಕಾಣಬರುತ್ತದೆ. ಹೊಯ್ಸಳರ ದೇವಾಲಯಗಳಲ್ಲಿ ಒಳ ಪಕ್ಷಿಗೆ ಪಥವಿರುವುದಿಲ್ಲ ಎಂಬುದು ಸಹ ತಿಳಿದುಬರುತ್ತದೆ.

ಮಿರ್ಲೆ ಗ್ರಾಮದಲ್ಲಿರುವ ಈ ಅಮೃತೇಶ್ವರ ದೇವಾಲಯದ ಗರ್ಭಗೃಹವನ್ನು ಒಂದು ಪ್ರಾಸಾದವನ್ನು ರಚಿಸಿ ಏಕಕೂಟ ಆಲಯಗಳನ್ನು ನಿರ್ಮಿಸುತ್ತಿದ್ದಾರೆ. ಇದು ಏಕಕೂಟ ದೇವಾಲಯವಾಗಿದೆ. ಈ ದೇವಾಲಯವು 12x10 ಅಡಿ ಅಳತೆಯ ಆಯತಕಾರವಾಗಿದೆ. ಇದರ ಗರ್ಭಗುಡಿಯ ಮಧ್ಯದಲ್ಲಿ ಮೂರು ಅಡಿ ಎತ್ತರವಾದ ಪೀಠದ ಮೇಲೆ ಒಂದು ಅಡಿ ಎತ್ತರವಾದ ಶಿವಲಿಂಗವೊಂದನ್ನು ಪ್ರತಿಷ್ಠಾಪಿಸಲಾಗಿದೆ. ಇದೇ ಲಿಂಗದ ಮೇಲೆ ಮೂರುಗೆರೆಯ ವಿಭೂತಿ ಧರಿಸಿದ ರೀತಿಯಲ್ಲಿ ಕೆತ್ತಲಾಗಿದೆ. ಈ ಶಿವಲಿಂಗದ ಮೇಲೆ ಧಾರಜಲ ಮತ್ತು ಅಭಿಷೇಕದ ನೀರು ಸರಾಗವಾಗಿ ಹೊರಹೋಗಲು ವ್ಯವಸ್ಥೆ ಮಾಡಲಾಗಿದೆ. ಇದೇ ಗರ್ಭಗುಡಿಯ ಮೇಲ್ಭಾಗದಲ್ಲಿ ಭುವನೇಶ್ವರಿ ನಿರ್ಮಿಸಿದ್ದು, ಚೌಕಾಕಾರ ಪಟ್ಟಿಕೆಯನ್ನು ನಿರ್ಮಿಸಿ ಅದರ ಒಳಗೆ ನಾಲ್ಕು ಚಿಕ್ಕಕಮಲಕಾರದ ಹೂಗಳನ್ನು ನಿರ್ಮಿಸಿದ್ದು, ಅದರ ಒಳಗೆ ದೊಡ್ಡದ ಕಮಲದ ಹೂವು ಅರಳಿದ ರೀತಿಯಲ್ಲಿ ಕೆತ್ತಲಾಗಿದೆ. ಗರ್ಭಗುಡಿಯಲ್ಲಿ ಶಿವನಿಗೆ ಅಲಂಕಾರಕ್ಕಾಗಿ ಪ್ರಭಾವಳಿಯನ್ನು ಇಡಲಾಗಿದೆ. ಪ್ರಭಾವಳಿಯಲ್ಲಿ ಚಾಮರ, ಧ್ವಜ ನವಿಲು, ವೇಲುಗಳಿಂದ ಕೂಡಿದ್ದ ಹಿತ್ತಾಳೆಯಿಂದ ಮಾಡಿಸಲಾಗಿದೆ. ತಾಮ್ರದ ನಾಗರ ಹಾವಿನಿಂದ ಸುತ್ತಿದೆ ಶಿವನ ಮುಖವಾಡ ಇಡಲಾಗಿದೆ. ದ್ವಾರಬಂಧದಲ್ಲಿ ಯಾವುದೇ ಅಲಂಕಾರದ ಕೆತ್ತನೆ ಕಂಡುಬಂದಿಲ್ಲ. ಲಾಲಾಟಬಿಂಬದಲ್ಲಿ ನಂದಿಯಿದೆ.

ಇದೇ ದೇವಾಲಯವು ಅಂತರಾಳವನ್ನು ಹೊಂದಿದೆ. ಇಲ್ಲಿನ ಗರ್ಭಗೃಹದ ಅಂಗವಾಗಿ ಅದರ ಮುಂದೆ ಇರುವುದು ಅರ್ಧಮಂಟಪದ ಅಥವಾ ಅಂತರಾಳ. ಅದನ್ನು ಸುಕನಾಸಿ ಎಂದು ಕರೆಯುತ್ತಾರೆ. ದೇವರ ಪೂಜೆಗೆ ಬೇಕಾದ ಸಾಮಾಗ್ರಿಗಳನ್ನು ನೈವೇದ್ಯದ ಪದಾರ್ಥಗಳನ್ನು ಇಡಲು ಈ ಮಂಟಪವನ್ನು ಉಪಯೋಗಿಸಲಾಗುವುದು. ಉತ್ಸವದ ವಿಗ್ರಹಗಳೂ ಇಲ್ಲಿರುತ್ತವೆ. ಇದು ಗರ್ಭಗೃಹಕ್ಕಿಂತಲೂ ಚಿಕ್ಕದಾಗಿ ಅಥವಾ ಅದರಷ್ಟೇ ವಿಸ್ತಾರವಾಗಿರುವುದು. ಅಂತರಾಳದ ಮೇಲ್ಮಟ್ಟದ ಸುಕನಾಸಿ ಇದರ ಮೇಲೆ ಇರುವುದರಿಂದ ಇದಕ್ಕೆ ಸುಕನಾಸಿ ಎಂಬ ಹೆಸರು ಇದೆ. ಈ ಅಂತರಾಳಕ್ಕೆ ದ್ವಾರವಿದ್ದಾಗ ಅದನ್ನು ತೆರೆದ ಅಂತರಾಳ ಎಂದು ಹೇಳಲಾಗುತ್ತದೆ. ಕೆಲವು ದೇವಾಲಯಗಳನ್ನು ಅಂತರಾಳದಲ್ಲಿ ದೇವರ ವಾಹನಗಳಾದ ನಂದಿ, ಗರುಡ, ನವಿಲು ಶಿಲ್ಪಗಳಿರುತ್ತದೆ.

ಅಮೃತೇಶ್ವರ ದೇವಾಲಯದಲ್ಲಿ ಅಂತರಾಳವು 7x7 ಅಡಿ ಅಳತೆಯ ಚಿಕ್ಕದಾದ ಚೌಕಾಕಾರದ ಅಂತರಾಳವಾಗಿದೆ. ಈ ಅಂತರಾಳವು ಗರ್ಭಗುಡಿಯ ಮುಂಭಾಗದಲ್ಲಿದೆ. ಅಮೃತೇಶ್ವರ ದೇವರ ವಾಹನವಾದ ನಂದಿಶಿಲ್ಪವನ್ನು ಈ ಅಂತರಾಳದಲ್ಲಿ ಕಾಣಬರುತ್ತದೆ. ನಂದಿಶಿಲ್ಪವು ಸುಂದರವಾಗಿದ್ದು ವಿಸ್ತಾರವಾಧ 6 ಅಡಿ ಉದ್ದವಾದ ಒಂದು ಅಡಿ ಎತ್ತರವಾದ ಅಳತೆಯ ಕಲ್ಲಿನ ಮೇಲೆ ನಂದಿಯನ್ನು ಸ್ಥಾಪಿಸಲಾಗಿದೆ. ಈ ನಂದಿ ಶಿಲ್ಪವು ಮೂರು ಅಡಿ ಉದ್ದವಾಗಿದ್ದು ಎರಡು ಅಡಿ ಎತ್ತರವಾಗಿದೆ. ನಂದಿಯು ಶಿವನಿಗೆ ಮುಖ ಮಾಡಿ, ಅಂದರೆ ಪಶ್ಚಿಮ ದಿಕ್ಕಿಗೆ ನೋಡುತ್ತಿದೆ. ಅಂತರಾಳದ ಮೇಲ್ಭಾಗದಲ್ಲಿ ಸುಖನಾಸಿ ಕಂಡು ಬಂದಿಲ್ಲವಾಗಿದೆ. ಇದರ ಅಂತರಾಳದ ಮೇಲ್ಛಾವಣಿಯ ಮೇಲೆ ಭುವನೇಶ್ವರಿ ಕಂಡು ಬಂದಿಲ್ಲವಾಗಿದೆ. ದ್ವಾರಬಂಧದ ಲಾಲಾಟಬಿಂಬದಲ್ಲಿ ನಂದಿಯನ್ನು ಕೆತ್ತಲಾಗಿದೆ.

ಇದೇ ದೇವಾಲಯವು ನವರಂಗವನ್ನು ಕೂಡ ಹೊಂದಿದೆ. ಇದು ಅಂತರಾಳ ಅಥವಾ ಅರ್ಧಮಂಟಪದ ಮುಂದಿನ ಮಂಟಪವೇ ನವರಂಗವೇ ಆಗಿರುತ್ತದೆ. ದೇವರಿಗಾಗಿ ಸಂಗೀತ ಮತ್ತು ನೃತ್ಯ ಸೇವೆಯನ್ನು ಸಲ್ಲಿಸುವ ಮಹತ್ವದ ಉದ್ದೇಶದಿಂದಲೇ ಈ ಮಂಟಪವನ್ನು ರಚಿಸಲಾಗಿರುತ್ತದೆ. ಇದಕ್ಕೆ ನೃತ್ಯ ಮಂಟಪ, ಮಹಾಮಂಟಪ, ಗೂಢಮಂಟಪ, ರಂಗಮಂಟಪ, ಭೋಗಮಂಟಪ ಮುಂತಾದ ಹೆಸರುಗಳಿದ್ದವು. ಇದರ ಪರ್ಯಾಯ ಪದಗಳಾಗಿವೆ. ನವರಂಗ ವಿಸ್ತಾರವಾದ ಮಂಟಪ. ಇದು ಚೌಕ ಅಥವಾ ಆಯತಾಕಾರವಾಗಿರುವುದು. ಕೆಲವೊಮ್ಮೆ ಪ್ರತ್ಯೇಕ ಅಧಿಷ್ಠಾನವಿರುತ್ತದೆ. ನವರಂಗದಲ್ಲಿ ನಾಲ್ಕು ಮೂಲೆಗಳಲ್ಲಿ (ವೇದಿಕೆ ಇಲ್ಲದಾಗ, ಮಂಟಪದ ಮಧ್ಯದಲ್ಲಿ) ಪ್ರಧಾನವಾದ ನಾಲ್ಕು ಸ್ತಂಭಗಳಿದ್ದು, ನಾಲ್ಕು ಅಂಕಣಗಳಿರುತ್ತದೆ.

ಇದೇ ಅಮತೇಶ್ವರ ದೇವಾಲಯದಲ್ಲಿನ ನವರಂಗವು 25x20 ಅಡಿ ಅಳತೆಯ ಆಯತಾಕಾರವಾದ ರಂಗಮಂಟಪವಾಗಿದೆ. ಈ ನವರಂಗದಲ್ಲಿ ಸುಂದರವಾದ ಭುವನೇಶ್ವರಿ ನಿರ್ಮಿಸಿದ್ದಾರೆ. ಅಷ್ಟಕೋನಾಕೃತಿ ಚೌಕಗಳು ಅದರ ಮಧ್ಯಭಾಗದಲ್ಲಿ ಚಕ್ರಾಕಾರ ರೀತಿಯಲ್ಲಿ ನಿರ್ಮಿಸಿದ್ದು, ಅದರ ಮಧ್ಯದಲ್ಲಿ ಮೊಗ್ಗಿನ ರೀತಿಯಲ್ಲಿ ನಿರ್ಮಿಸಿದ್ದಾರೆ. ಸುತ್ತಲೂ ಚಿಕ್ಕಚಿಕ್ಕದಾದ ಕಮಲದ ಹೂವನ್ನು ನಿರ್ಮಿಸಿದ್ದಾರೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಗ್ರಾನೈಟ್ ಶಿಲೆಗಳಿಂದ ನಿರ್ಮಿಸಿದ್ದಾರೆ. ನವರಂಗದಲ್ಲಿ ಗಣೇಶ ಮತ್ತು ಪಾರ್ವತಿ ಕೋಷ್ಟ ಗುಡಿಗಳಿವೆ ಎಂಬುದನ್ನು ಗುರುತಿಸಲಾಗಿದೆ.

ಇದೇ ಅಮೃತೇಶ್ವರ ದೇವಾಲಯದಲ್ಲಿರುವಂತಹ ಕೋಷ್ಟ ಗುಡಿಗಳನ್ನು ಗ್ರಹಿಸಿದಾಗ; ಅಂತರಾಳದ ಮುಂದಿನ ನವರಂಗದ ಬಲಭಾಗದಲ್ಲಿ ಎಂಟು ಅಡಿ ಎತ್ತರವಾದ ಪೀಠದ ಮೇಲೆ ಐದು ಅಡಿ ಎತ್ತರವಾದ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಇದು ಮೂರು ಅಡಿ ಎತ್ತರವಾದ ಗಣೇಶ ಮೂರ್ತಿಯಿದ್ದು ನಾಲ್ಕು ಕೈಗಳನ್ನು ಹೊಂದಿದೆ. ಒಂದು ಕೈಯಲ್ಲಿ ಅಭಯ ಹಸ್ತ ಮತ್ತು ಫಲವನ್ನು ಮತ್ತೊಂದುಕೈಯಲ್ಲಿ ಹಿಡಿದಿದೆ. ಮೈ ಮೇಲೆ ವಿವಿಧ ಬಗೆಯ ವಸ್ತ್ರಾಭರಣ ಧರಿಸಿರುವಂತೆ ಹಾಗೂ ಹೊಟ್ಟೆಯಲ್ಲಿ ಸರ್ಪವನ್ನು ಕಟ್ಟಿರುವ ರೀತಿ ಕೆತ್ತಲಾಗಿದೆ. ಎಡಕಾಲಿನ ಹತ್ತಿರ ಚಿಕ್ಕದಾಗಿ ಮೂಶಿಕನನ್ನು ಕೆತ್ತಲಾಗಿದೆ. ಕೋಷ್ಟ ಗುಡಿ ಹೂವು ಬಳ್ಳಿ ಮತ್ತು ಚಕ್ರದಿಂದ ಅಲಂಕರಿಸಲಾಗಿದ್ದು, ಇದಕ್ಕೆ ಪ್ರಭಾವಳಿ ಹಾಕಲಾಗಿದೆ.

ಇದೇ ದೇವಾಲಯದ ನವರಂಗದ ಎಡಭಾಗದ ದಕ್ಷಿಣಕ್ಕೆ ಪಾರ್ವತಿ ದೇವಿಯ ಕೋಷ್ಟ ಗುಡಿಯಿದ್ದು, ಇದು ಹತ್ತು ಅಡಿ ಎತ್ತರವಾದ ಐದು ಅಡಿ ಅಗಲವಾದ ಕೋಷ್ಟಗುಡಿ ನಿರ್ಮಾಣ ಮಾಡಲಾಗಿದೆ. ಅದರ ಒಳಗೆ ಐದು ಅಡಿ ಎತ್ತರವಾದ ಒಂದು ಅಡಿ ಅಗಲವಾದ

ಪಾರ್ವತಿ ವಿಗ್ರಹವನ್ನು ಸ್ಥಾಪಿಸಲಾಗಿದೆ. ಪಾರ್ವತಿ ದೇವಿಯು ನಾಲ್ಕು ಕೈಗಳಿದ್ದು ಅದರಲ್ಲಿ ಒಂದು ಕೈ ಅಭಯ ನೀಡುವಂತೆ ಮೇಲಿನ ಕೈ ಮತ್ತೊಂದು ಕಡೆ ವರದ ಹಸ್ತವನ್ನು ಕೆತ್ತಲಾಗಿದೆ. ಉಳಿದ ಎರಡು ಕೈಗಳಲ್ಲಿ ತ್ರಿಶೂಲ ಮತ್ತು ಗಧೆಯನ್ನು ಕೂಡ ಹಿಡಿಯಲಾಗಿದೆ. ನಿಂತಿರುವ ರೀತಿಯ ಶಿಲ್ಪದಲ್ಲಿ ಆಭರಣ ಭೂಷಿತಳಾಗಿ ತಾಳಿ, ಬಳೆ, ವಡ್ಯಾಣ, ಗೆಜ್ಜೆಗಳನ್ನು ಧರಿಸಿರುವಂತೆ ಮಾಡಲಾಗಿದೆ. ಈ ಕೋಷ್ಟಗುಡಿಗೂ ಪ್ರಭಾವಳಿ ಹಾಕಲಾಗಿದ್ದು, ಅದು ಹಿತ್ತಾಳೆಯಿಂದ ಉಬ್ಬುಕೆತ್ತನೆ ಮಾಡಿ ಹಾಕಲಾಗಿದೆ. ಗರ್ಭಗುಡಿಯಲ್ಲಿ ಗಣೇಶ ಹಿತ್ತಾಳೆ ಮೂರ್ತಿಯು ಇದೆ. ಅದು ಒಂದು ಅಡಿ ಎತ್ತರವಾಗಿದ್ದು ಒಂದು ಅಡಿ ಅಗಲವಾಗಿದೆ.

ಇದೇ ದೇವಾಲಯದಲ್ಲಿರುವಂತಹ ಕಂಬಗಳು ಹೊಯ್ಸಳರ ಶೈಲಿ ದೇವಾಲಯವಾಗಿದ್ದು, ಆದರೆ ಇದು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಈ ಕಂಬಗಳು ಸೂಕ್ಷ್ಮಕೆತ್ತನೆಗೆ ಯೋಗ್ಯವಾಗಿಲ್ಲ. ಆದ್ದರಿಂದ ಈ ಕಂಬಗಳನ್ನು ಬುಡದಲ್ಲಿ ಪೀಠಭಾಗಗಳಿದ್ದು, ಅನಂತರ ಪಾದ, ದಂಡ, ಲಕುನ, ತಾಟಿಕಾ ಮತ್ತು ಘಟ, ಮಂಡಿ, ವೀರಕಂಠ, ಬೋದಿಗ ಅಥವಾಗ್ರೀವ, ಶಿರ ಭಾಗಗಳು ಈ ಕಂಬಗಳಲ್ಲಿ ಕಾಣಬಹುದಾಗಿದೆ. ನಾಲ್ಕು ಕಂಬಗಳು ದಪ್ಪದಾಗಿವೆ. ದೇವಾಲಯದಲ್ಲಿ ನಾಲ್ಕು ಕಂಬಗಳು ಬಿಟ್ಟರೆ ಯಾವುದೇ ಬೇರೆ ಕಂಬಗಳು ಕಂಡು ಬಂದಿಲ್ಲವಾಗಿದೆ.

ಇದೇ ಅಮೃತೇಶ್ವರ ದೇವಾಲಯದಲ್ಲಿನ ಗರ್ಭಗೃಹ ಮತ್ತು ನವರಂಗಗಳಲ್ಲಿ ಭುವನೇಶ್ವರಿಯು ಕಂಡುಬಂದಿದೆ. ಎರಡು ಭುವನೇಶ್ವರಿ ಸಾಧರಣವಾಗಿವೆ. ಅದರಲ್ಲಿ ನವರಂಗದ ಭುವನೇಶ್ವರಿ ನಾಲ್ಕು ಕಂಬಗಳ ಮಧ್ಯದಲ್ಲಿ ದೊಡ್ಡದಾದ ಸಾಧರಣ ಅಲಂಕಾರದ ಅಂದರೆ, ಚಕ್ರದಂತಹ ಆಕೃತಿಯ ಮಧ್ಯ ಮೊಗ್ಗಿನ ರೀತಿಯಲ್ಲಿ ನಿರ್ಮಾಣ ಮಾಡಲಾಗಿದೆ. ಅದರ ಸುತ್ತಲೂ ಚೌಕಾಕಾರವಾದ ಪಟ್ಟಿಕೆಗಳು ಸಣ್ಣ –ಸಣ್ಣ ಹೂವುಗಳನ್ನು ಕೆತ್ತಲಾಗಿದೆ.

**ಮುಖಮಂಟಪ:** ಹೊಯ್ಸಳ ಕಾಲದ ದೇವಾಲಯವಾಗಿದ್ದು, ಕೆಲವು ದೇವಾಲಯಗಳಲ್ಲಿ ಮುಖಮಂಟಪ ಕಂಡು ಬರುವುದಿಲ್ಲ. ಆದರೆ, ಈ ದೇವಾಲಯದಲ್ಲಿ ಯಾವುದೇ ಮುಖಮಂಟಪ ಕಂಡು ಬಂದಿಲ್ಲವಾಗಿದೆ.

**ದೇವಾಲಯದ ತಳವಿನ್ಯಾಸ:** ಪ್ರತಿ ಗರ್ಭಗೃಹದ ಮೇಲೂ ಒಂದೊಂದು ಪ್ರಸಾದಗಳನ್ನು ರಚಿಸಿ ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಕ ಮತ್ತು ಪಂಚಕೂಟ ಆಲಯಗಳನ್ನು ನಿರ್ಮಿಸಿದ್ದಾರೆ. ಗರ್ಭಗೃಹಗಳೆಲ್ಲವೂ ಒಳಭಾಗದಲ್ಲಿ ಸಾಮಾನ್ಯ ಚೌಕ ಮತ್ತು ಆಯತಾಕಾರವಾಗಿರುತ್ತದೆ. ದ್ರಾವಿಡ ಶೈಲಿಯಲ್ಲಿದ್ದು ಚೌಕಕಾರದ ಗರ್ಭಗೃಹ ಹೊಂದಿದೆ. ನವರಂಗ ಆಯತಕಾರಾವಿದ್ದು ಮುಂದೆ ಧ್ವಜ ಸ್ತಂಭವಿದೆ. ಒಳಪದಕ್ಷಿಣ ಪಥವಿಲ್ಲ. ಬಲೀಠವಿದೆ. ಸರಳವಾದ ನವರಂಗ, ವಿನ್ಯಾಸದಿಂದ ಕೂಡಿದೆ. ಭುವನೇಶ್ವರಿ, ಸುರಳಿ ಕಂಬಗಳು, ಸಣ್ಣ–ಸಣ್ಣ ಕೋಷ್ಟಗುಡಿಗಳಿಂದ ಕೂಡಿದೆ.

**ಅಧಿಷ್ಠಾನ:** ಅಧಿಷ್ಠಾವನವೂ ಹೊಯ್ಸಳರ ದೇವಾಲಯದ ಒಂದು ಆಕರ್ಷಕ ಅಂಗವಾಗಿದೆ. ಇವುಗಳೆಲ್ಲ ಎರಡು ಬಗೆಗಳುಂಟು. ಒಂದು ಸಾಧಾರಣ ಅಧಿಷ್ಠಾನ, ಇನ್ನೊಂದು ಸಾಲಂಕೃತ, ಸಾಧಾರಣ ರೀತಿಯದರಲ್ಲಿ ದ್ರಾವಿಡ ಮಾದರಿಯ ಸಾಧಾರಣವೇ ಆಗಿರುತ್ತದೆ. ಅಂದರೆ ಕಂಠ ಮತ್ತು ಕಪೋತ, ಕುಮುದವು, ನೀಲವಾದ ಪಟ್ಟಿಕೆಗಳಿಂದ ನಿರ್ಮಾಣವಾಗಿದೆ.

**ಭಿತ್ತಿ:** ಹೊಯ್ಸಳ ದೇವಾಲಯಗಳಲ್ಲಿ ವಿಶೇಷವಾದ ಅಲಂಕಾರಿಕ ಭಿತ್ತಿ ಶಿಲ್ಪಗಳನ್ನು ಕಾಣಬಹುದು. ಈ ದೇವಾಲಯದಲ್ಲಿ ವಿಶೇಷವಾದ ಕೆತ್ತನೆಗಳು ಕಂಡುಬಂದಿಲ್ಲವಾಗಿದೆ. ನಿರಾಲಂಕೃತ ಭಿತ್ತಿ ಎಂದು ಕರೆಯಲಾಗುತ್ತದೆ. ನಿರಾಲಂಕೃತ ಭಿತ್ತಿಗಳಲ್ಲಿ ಕೇವಲ ವಾಸ್ತು ಅಲಂಕರಣಗಳನ್ನು ಮಾತ್ರ ಕಾಣಬಹುದು. ಇದೇ ಅಮೃತೇಶ್ವರ ದೇವಾಲಯದ ಭಿತ್ತಿಯಲ್ಲಿ ಭಿತ್ತಿಪಾದಗಳು, ಕಪೋತ ಪಂಜರಗಳು, ಸ್ತಂಭ ಪಂಜರಗಳಿಂದ ಅಲಂಕೃತವಾಗಿ ಗೋಡೆ ನಿರ್ಮಿಸಲಾಗಿದೆ. ಕಪೋತ ಪಂಜರಗಳು ಗರ್ಭಗುಡಿಯ ಭಿತ್ತಿಯಲ್ಲಿ ಇದು ಯಾವುದೇವರ ಮೂರ್ತಿಗಳು ಇರುವುದಿಲ್ಲ. ಖಾಲಿ ಜಾಗ ಬಿಟ್ಟಿರುತ್ತಾರೆ. ನವರಂಗದ ಭಿತ್ತಿಯಲ್ಲಿ ಸ್ತಂಭ ಪಂಜರಗಳಿವೆ.

**ಶಿಖರ:** ಇದೇ ಅಮೃತೇಶ್ವರ ದೇವಾಲಯದ ಗರ್ಭಗುಡಿಯ ಮೇಲ್ಭಾಗದಲ್ಲಿ ನಿರ್ಮಿಸಿರುವ ಭಾಗವೇ ಶಿಖರ, ಹೊಯ್ಸಳ ಕೆಲವು ದೇವಾಲಯ ಶಿಖರದ ಭಾಗ ಕಂಡುಬಂದಿಲ್ಲ. ಅದೇ ರೀತಿಯಾಗಿ ಮಿರ್ಲೆಯ ಅಮೃತೇಶ್ವರ ದೇವಾಲಯದ ಶಿಖರ ಭಾಗಕಂಡು ಬಂದಿಲ್ಲವಾಗಿದೆ. ಈ ದೇವಾಲಯವು ಸ್ಥಳಾಂತರ ಮಾಡಿದ್ದು, ಶಿಖರ ಭಾಗ ಹಾಳಾಗಿರಬಹುದು. ಹಾಗೆಯೇ ಸುಖನಾಸಿಯು ಕಂಡು ಬರುವುದಿಲ್ಲವಾಗಿದೆ.

**ದ್ವಾರಬಂಧಗಳು:** ಅಮೃತೇಶ್ವರ ದೇವಾಲಯ ದ್ವಾರಬಂಧಗಳು ಹೆಚ್ಚು ಅಲಂಕಾರಕಂಡು ಬಂದಿಲ್ಲವಾಗಿದೆ. ಗರ್ಭಗೃಹದ ದ್ವಾರಬಂಧ ಪಟ್ಟಿಕೆಗಳಿಂದ ನಿರ್ಮಿಸಿದ್ದು, ಲಾಲಾಟ ಬಿಂಬದಲ್ಲಿ ನಂದಿಯಉಬ್ಬು ಶಿಲ್ಪವಿದೆ. ಅಂತರಾಳದ ದ್ವಾರಬಂಧದಲ್ಲಿ ಏಣುಗಳು, ಭಿತ್ತಿ ಪಾದದಿಂದ ನಿರ್ಮಿಸಿದ್ದು, ಮಧ್ಯ ಲಾಲಾಟ ಬಿಂಬದಲ್ಲಿ ನಂದಿಯ ಉಬ್ಬು ಶಿಲ್ಪವಿದೆ. ನವರಂಗದ ದ್ವಾರಬಂಧವು ಸಾಮಾನ್ಯವಾಗಿದೆ.

**ಪ್ರಾಕಾರ:** ದೇವಾಲಯ ಹೊರಭಾಗ ಸುತ್ತಲು ನಿರ್ಮಿಸಿರುವ ಗೋಡೆಯನ್ನು ಪ್ರಾಕಾರ ಎನ್ನುವರು. ಈ ಗೋಡೆಯ ಭಾಗವು ಇಂದಿನ ಸೀಮೆಂಟಿನಿಂದ ನಿರ್ಮಿಸಲಾಗಿದೆ. ಆವರಣ ವಿಸ್ತಾರವಾಗಿದ್ದು, ಯಾವುದೇ ರೀತಿಯಾದ ವಿಶೇಷತೆಯಿಲ್ಲವಾಗಿದೆ. ದೇವಾಲಯ ಮುಂದೆ ಗರ್ಭಗುಡಿಗೆ ನೇರವಾಗಿ ಬಲಿಪೀಠವಿದೆ. ದೇವರ ನೈವೇದ್ಯವನ್ನು ಹಾಕಲು ಕಲ್ಲಿನಒಂದು ಕಂಬ ಅಥವಾ ಪೀಠದ ರೀತಿ ನಿರ್ಮಿಸಿರುತ್ತಾರೆ. ಪ್ರಾಕಾರವಿಲ್ಲದ ಕಾರಣ ಜೊತೆ ಗೋಪುರವು ಸಹ ಕಂಡುಬರುವುದಿಲ್ಲವಾಗಿದೆ. ಈ ದೇವಾಲಯದಲ್ಲಿ ಯಾವುದೇ ಪರಿವಾರ ದೇವತೆಗಳು ಕಂಡು ಬಂದಿಲ್ಲವಾಗಿದೆ. ಈ ಅಮೃತೇಶ್ವರ ದೇವಾಲಯವು ಪುರಾತತ್ವ ಇಲಾಖೆಯಿಂದ ಸಂರಕ್ಷಿಸಲ್ಪಟ್ಟಿದೆ.

ಹೀಗೆ, ಕೃಷ್ಣರಾಜನಗರ ತಾಲೋಕಿನ ಮಿರ್ಲೆ ಗ್ರಾಮದಲ್ಲಿ ನಿರ್ಮಾಣಗೊಂಡಿರುವಂತಹ ಅಮೃತೇಶ್ವರ ದೇವಾಲಯದ ಒಂದು ಚಾರಿತ್ರಿಕ ವೀಕ್ಷಣೆಯನ್ನು ಮಾಡಲಾಗಿರುತ್ತದೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


1. ಕೃಷ್ಣರಾಜನಗರ ತಾಲೂಕು ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 2010
2. ಮೈಸೂರು ಜಿಲ್ಲೆಯ ಗ್ಯಾಸೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು, 1988
3. ಅನಂತರಂಗಾಚಾರ್. ಎನ್, ಭಾರತೀಯ ದೇವಾಲಯಗಳು ಮತ್ತು ಸಂಸ್ಕೃತಿ, ಸ್ವಚ್ಛಂದಂ ಪ್ರಕಾಶನ, ಮೈಸೂರು, 1984
4. ಚಿದಾನಂದ ಮೂರ್ತಿ. ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು, 1996
5. ರಾಜೇಂದ್ರ ಡಿ.ಕೆ. ಗುರುಸ್ವಾಮಿ, ಭಾನುಮತಿ ವೈ.ಸಿ. (ಸಂ): ಮೈಸೂರು ದರ್ಶನ, (ಸಂ–4), ಪ್ರಸಾರಾಂಗ, ಕ.ರಾ.ಮು.ವಿ., ಮಾನಸಗಂಗೋತ್ರಿ, ಮೈಸೂರು–2012.